**<u>ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 02-09-2023.</u>**
**<u>ಮುಂದುವರೆದ ಪಾಟೀ ಸವಾಲುಃ 2 ಮತ್ತು 4 ನೇ ಪ್ರತಿವಾದಿ ಪರ ಶ್ರೀ.ವಿ ಎನ್ ಪಿ ವಕೀಲರಿಂದಃ</u>**

1. ನಿಡಿ.16 Self assessment tax paid receipt. ನನ್ನ ಆಡಿಟರ್ ನನ್ನ ಆದಾಯದ ಬಗ್ಗೆ ದಾಖಲೆಗಳನ್ನು ಇಟ್ಟಿದ್ದಾರೆ. ಸದರಿ ಆದಾಯ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನೀವು ನಿಮ್ಮ 31.03.2013 ರ ಕ್ಯಾಪಿಟಲ ಅಕೌಂಟನಲ್ಲಿ hand loan repaid to Arjun Badaskar ಎಂದು ಬರೆದಿದ್ದಿರಾ ಆದರೆ ಯಾವ ದಿನಾಂಕದಂದು ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿಯು capital account statement ನಲ್ಲಿ ದಿನಾಂಕ ನಮೂದು ಮಾಡುವ ಅವಶ್ಯಕತೆ ಇರುವುದಿಲ್ಲ ಎಂದು ಹೇಳುತ್ತಾರೆ. ನಾನು ಅರ್ಜುನ ಬಡಸ್ಕರರವರಿಗೆ ಸಾಲ ಮರುಪಾವತಿ ಮಾಡಿರುವ ದಿನಾಂಕ ನೆನಪಿಲ್ಲ ಆದರೆ 2012-13 ರಲ್ಲಿ ಕೊಟ್ಟಿದ್ದೇನೆ. ನಾನು ಆದಾಯ ತೆರಿಗೆ ಕಚೇರಿಗೆ ಸುಳ್ಳು ಮಾಹಿತಿಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ನಿಡಿ.16 ರಿಂದ 18 ಗಳನ್ನು ಖೊಟ್ಟಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** ಪ್ರತಿವಾದಿ ನಂ.5 ರ ಪರ ವಕೀಲರು ಹಾಜರು ಇದ್ದು ಪ್ರತಿವಾದಿ ನಂ.2 ಮತ್ತು 4 ರವರ ಪರ ವಕೀಲರು ಕೇಳಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು, ಪ್ರತಿವಾದಿ ನಂ.5 ರವರು ಈಗಾಗಲೆ ಪ್ರತಿವಾದಿ ನಂ.2 ಮತ್ತು 4 ರವರು ಸಲ್ಲಿಸಿರುವ ಪ್ರತಿವಾದ ಪತ್ರದ ಅಂಶಗಳನ್ನು ಅಳವಡಿಸಿಕೊಂಡಿದ್ದಾರೆ ಆದ್ದರಿಂದ ಪಾಟೀ ಸವಾಲನ್ನು ಸಹ ಅಳವಡಿಸಿಕೊಳ್ಳಲು ಅನುಮತಿಸಲಾಯಿತು.

**<u>ಮರುವಿಚಾರಣೆ ಇಲ್ಲ.</u>**

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**